

## ನೀವೇ ಪ್ರಯತ್ನಿಸಿ

'ಹಾಟ್ ಗ್ಲೂ ಗನ್' ಹಾಗೂ ಬೇಕಾದ ಬಟ್ಟೆ ಇದ್ದರೆ ನಮ್ಮ ಚಪ್ಪಲಿಗೆ ನಮ್ಮದೇ ವಿನ್ಯಾಸದ ಸ್ಪೀಪರ್ಡ್ ಸ್ಪರ್ಶ ನೀಡಬಹುದು.

ರಬ್ಬರ್ ಅಥವಾ ಸಾಫ್ಟ್ ಲೆದರ್ ಚಪ್ಪಲಿಯ ಸೋಲ್/ಇನ್‌ಸೋಲ್‌ನ್ನು ಅಳತೆ ಮಾಡಿ ಅಚ್ಚು ತೆಗೆದುಕೊಳ್ಳಿ. ಕಲಂಕಾರಿ/ಇಕತ್/ರೇಷ್ಮೆ ಅಥವಾ ಬ್ಲಾಕ್ ಪ್ರಿಂಟ್‌ನ ಬಟ್ಟೆಯನ್ನು ಆ ಅಳತೆಗೆ ಅನುಗುಣವಾಗಿ ಕತ್ತರಿಸಿ.

ಸೋಲ್ ಮೇಲೆ ಗ್ಲೂ ಗನ್‌ನಿಂದ ಸೋಲ್ ಮೇಲೆ ಮೇಲಿನ ಆಕಾರದಲ್ಲಿ ಗಮ್ ಹಾಕಿ. ಕತ್ತರಿಸಿದ ಬಟ್ಟೆಯನ್ನು ತಕ್ಷಣ ಅಂಟಿಸಿ. ಹೇರ್ ಡ್ರೈಯರ್‌ನಿಂದ ಇದನ್ನು ಒಣಗಿಸಬಹುದು. ಹಾಗೇ ಇಟ್ಟರೂ ಒಣಗುತ್ತದೆ. ಚಪ್ಪಲಿಯ 'ಸ್ಟ್ರಾಪ್'ನ್ನು (ಪಾದವನ್ನು ಹಿಡಿದಿಡುವ ಮೇಲ್ಭಾಗ) ಕೂಡಾ ಇದೇ ರೀತಿಯ ವಿನ್ಯಾಸದಿಂದ ಅಂದಗೊಳಿಸಬಹುದು.

ಚಪ್ಪಟೆಯಾಕಾರದ ಶೂಗಳಿಗೆ ಈ ಬಟ್ಟೆಗಳನ್ನು ಹೊರಹೊದಿಕೆಯಾಗಿ ಅಂಟಿಸುವುದು ಬಹಳ ಸುಲಭ. ಇಡೀ ಶೂಗೆ ಅಂಟಿಸಲು ಆಗದೇ ಇದ್ದರೆ ಒಂದು ಭಾಗಕ್ಕಷ್ಟೇ ನಿಮ್ಮದೇ ವಿನ್ಯಾಸ ಮಾಡಬಹುದು. ಈಗ ನೋಡಿ, ನಿಮಗಿಷ್ಟದ ವಿನ್ಯಾಸದ ಚಪ್ಪಲಿ ನಿಮ್ಮ ಕೈಯಲ್ಲೇ ಸಿದ್ಧವಾಯಿತು!

ಶ್ರಗ್ ಮಾದರಿಯ ಆದರೆ ಪಾದದಿಂದ ಸ್ವಲ್ಪ ಮೇಲಕ್ಕೆ ನಿಲ್ಲುವ 'ಖಾನ್' ಶೈಲಿಯ ಇಕತ್ ಕುರ್ತಾದ ಮೇಲೆ ವಿರುದ್ಧ ಬಣ್ಣದ ಜಾಕೆಟ್ ಧರಿಸಿದ್ದೀರಿ ಅಂದುಕೊಳ್ಳಿ. ಇಕತ್ ಚಪ್ಪಲಿಯ ಕಾಂಬಿನೇಷನ್ ಮಾಡಿನೋಡಿ.

ಇಕತ್ ವಿನ್ಯಾಸಗಳಿಗೆ ಕೊಲ್ಹಾಪುರಿ ಚಪ್ಪಲಿಗಳು ಹೆಚ್ಚು ಹೊಂದುತ್ತವೆ. ಕೊಲ್ಹಾಪುರಿ ಸೋಲ್/ಇನ್‌ಸೋಲ್‌ಗೆ ನಾಜೂಕಾಗಿ ಕತ್ತರಿಸಿದ ಇಕತ್ ಬಟ್ಟೆಯನ್ನು ಹೊಲಿಯುವ ಕಾರಣ ವಿಶೇಷ ಇನ್ನಷ್ಟು ಆಕರ್ಷಕವಾಗುತ್ತದೆ. ಉಂಗುಷ್ಟದಿಂದ 'ಸ್ಟ್ರಾಪ್'ವರೆಗೂ (ಪಾದವನ್ನು ಹಿಡಿದಿಡುವ ಮೇಲ್ಭಾಗ) ಒಂದೇ ಬಣ್ಣದ ಬಟ್ಟೆಯನ್ನು ಬಳಸುವುದುಂಟು. ಚಪ್ಪಲಿಯ ಮುಂಭಾಗಕ್ಕೆ ಮಾತ್ರ ಅಸಿಮೆಟ್ರಿಕ್ ವಿನ್ಯಾಸದಲ್ಲಿ ಕತ್ತರಿಸಿದ ಬಟ್ಟೆ ಜೋಡಿಸುವುದೂ ಉಂಟು. ಸ್ಟ್ರಾಪ್‌ಗೆ ಮಾತ್ರ ಹೊಲಿಯುವುದೂ ಇದೆ. ಚರ್ಮದ ಪಾದರಕ್ಷೆಗೆ ಇಕತ್, ಕಲಂಕಾರಿ, ಬ್ಲಾಕ್ ಪ್ರಿಂಟ್ ಮತ್ತು ರೇಷ್ಮೆಯ ಬಟ್ಟೆ ಚೆನ್ನಾಗಿ ಹೊಂದುತ್ತದೆ. ಕಪ್ಪು, ಬಿಳಿ ಮತ್ತು ಕೆಂಪು ಬಣ್ಣದ ವಿನ್ಯಾಸವಿರುವ ಬಟ್ಟೆಯನ್ನು ಬಳಸಿದ್ದರೆ ಯಾವುದೇ ಬಣ್ಣದ ಉಡುಪುಗಳಿಗೂ ಹೊಂದುತ್ತದೆ.

ಈ ಬಗೆಯ ಚಪ್ಪಲಿಗಳು ಸೀರೆಗೆ ಅತ್ಯುತ್ತಮ ಕಾಂಬಿನೇಷನ್. ಆದರೆ ಸಿಂಥೆಟಿಕ್ ಮತ್ತು ಫ್ಯಾನ್ಸಿ ಸೀರೆಗಳಿಗೆ ಇದು ಹೊಂದುವುದಿಲ್ಲ. ಹತ್ತಿ, ಖಾದಿ, ಲಿನನ್, ರೇಷ್ಮೆಯ ಯಾವುದೇ ಬಗೆಯ ಸೀರೆ ಉಟ್ಟಾಗ ಹೊಂದುವ ಬಣ್ಣದ ಬಟ್ಟೆ ಚಪ್ಪಲಿ ಧರಿಸಿ ನೋಡಿ. ಕೈಚೀಲವೂ ಬಟ್ಟೆಯದ್ದಾಗಿದ್ದರೆ ಎಲ್ಲರ ಕಣ್ಣು ನಿಮ್ಮ ಮೇಲಿರುತ್ತದೆ.

ಫ್ಯಾಷನ್ ಜಗತ್ತಿನಲ್ಲಿ ಇವತ್ತು ಹುಟ್ಟಿಕೊಳ್ಳುವ ಹೊಸ ಟ್ರೆಂಡ್‌ಗಳು ನಾಳೆಗೆ ಹಳತಾಗುವುದು ಸಾಮಾನ್ಯ. ಆದರೆ ಈ ಬಗೆಯ ಚಪ್ಪಲಿಗಳು ಸಾರ್ವಕಾಲಿಕವಾಗಿ ಉಳಿಯುವುದು ದೇಸಿತನದ ಹೆಗ್ಗಳಿಕೆ. ■



# ಚಂದ ಚಂದದ ಚಪ್ಪಲಿ

ಸ್ಟೈಲಿಶ್ ಆಗಿ ಕಾಣಿಸಿಕೊಳ್ಳಲು ಬಯಸುವ ಹೆಣ್ಣು ಮಕ್ಕಳು ಬಗೆ ಬಗೆ ವಿನ್ಯಾಸದ ಚಪ್ಪಲಿಗಳನ್ನು ತಾವೇ ಸಿದ್ಧಪಡಿಸಿಕೊಳ್ಳಲು ಸಾಕಷ್ಟು ಅವಕಾಶಗಳಿವೆ. ಇದಕ್ಕೆ ಉತ್ತಮ ದರ್ಜೆಯ ಚಪ್ಪಲಿಗಳೇ ಬೇಕೆಂದೇನಿಲ್ಲ. ಅಗ್ಗದ ಬೆಲೆಯ ಚಪ್ಪಲಿಗಳನ್ನು ಖರೀದಿಸಿ ತಮಗೆ ಬೇಕಾದಂತೆ ಅಂದಗಾಣಿಸಿಕೊಳ್ಳಬಹುದು.

ಫುಟ್‌ಪಾತ್ ಅಂಗಡಿಗಳಿಂದ ಹಿಡಿದು ಬ್ರ್ಯಾಂಡೆಡ್ ಮಳಿಗೆಗಳಲ್ಲಿಯೂ ಈಗ ಹರಳುಗಳ ವಿನ್ಯಾಸವಿರುವ ಚಪ್ಪಲಿಗಳನ್ನು ಕಾಣಬಹುದು. ಅವುಗಳ ವಿನ್ಯಾಸ ಗಮನ ಸೆಳೆಯುತ್ತದೆಯೇ ಹೊರತು ಬ್ರ್ಯಾಂಡ್ ಅಲ್ಲ. ಅಗ್ಗದ ಚಪ್ಪಲಿಗಳೇ ಆದರೂ ವಿನ್ಯಾಸ ಮತ್ತು ಸೊಗಸಿನಿಂದಲೇ ಎಲ್ಲರಿಗೆ ಮೆಚ್ಚುಗೆಯಾಗುವುದು ಇದೇ ಕಾರಣಕ್ಕೆ.

ಹರಳು, ಜರಿ ವರ್ಕ್‌ನ ವಿನ್ಯಾಸಗಳನ್ನು ಮನೆಯಲ್ಲೇ ಸಲೀಸಾಗಿ ಮಾಡಿಕೊಳ್ಳಬಹುದು. ಯಾವುದಾದರೂ ಚಪ್ಪಲಿ, ನಿಮ್ಮ ಆಯ್ಕೆಯ ಲೇಸ್, ಹರಳು, ಮಣಿ ಅಥವಾ ಬೀಡ್ಸ್, ಸಿಂಥೆಟಿಕ್ ರಿಬ್ಬನ್ ಮತ್ತು ಗ್ಲೂ ಗನ್ ಇದ್ದರಾಯಿತು. ಚಪ್ಪಲಿಯ ಯಾವ ಭಾಗಗಳಿಗೆ ಹರಳು, ಮಣಿ ಕೂರಿಸಬೇಕು, ಇನ್ನುಳಿದ ಭಾಗಕ್ಕೆ ಯಾವ ಬಣ್ಣದ ಲೇಸ್ ಅಥವಾ ರಿಬ್ಬನ್ ಅಂಟಿಸಬೇಕು ಎಂಬುದನ್ನು ಮೊದಲೇ ನಿರ್ಧರಿಸಿಕೊಂಡು ಕತ್ತರಿಸಿಕೊಂಡರಾಯಿತು. ಇಲ್ಲದಿದ್ದರೆ ಅಳತೆ ಏರುಪೇರು ಆಗಿ ಸಾಮಗ್ರಿ ವ್ಯರ್ಥವಾಗುವ ಸಾಧ್ಯತೆ ಇದೆ.

ಬಣ್ಣಗಳ ಸಂಯೋಜನೆಯ ಆಯ್ಕೆ ವೇಳೆ ನಿಮ್ಮಲ್ಲಿರುವ ಸೀರೆ ಅಥವಾ ಉಡುಪಿನ ಬಣ್ಣಕ್ಕೆ ಹೊಂದುವಂತಹುದನ್ನೇ ಆಯ್ಕೆ ಮಾಡಿಕೊಳ್ಳುವುದು ಉತ್ತಮ. ವಿನ್ಯಾಸ ಮಾಡುವುದರಲ್ಲಿ ಒಮ್ಮೆ ಕೈ ಪಳಗಿದರೆ ಹೊಸ ವಿನ್ಯಾಸಗಳ ಅನ್ವೇಷಣೆ ಸುಲಭ. ■